**ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿರುವ ಗ್ರೂಪ್ "ಬಿ" ಅಧಿಕಾರಿಗಳ ಸಂಖ್ಯೆ**

1577. ಶ್ರೀ ಎ.ಎಂ. ಹಿಂಡಸ್ಗೇರಿ (ಹುಬ್ಬಳ್ಳಿ) :– ಮಾನ್ಯ ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಆಹಾರ ಮತ್ತು ನಾಗರೀಕ ಸರಬರಾಜು ಇಲಾಖೆಯಲ್ಲಿರುವ ಗ್ರೂಪ್ 'ಬಿ' ಅಧಿಕಾರಿಗಳ ಒಟ್ಟು ವೃಂದ ಬಲ ಎಷ್ಟು?

ಆ) ಪದೋನ್ನತಿಗಳಿಗಾಗಿ ಇರುವ ಹುದ್ದೆಗಳ ಸಂಖ್ಯೆ ?

ಇ) ಈ ಪದೋನ್ನತಿ ಹುದ್ದೆಗಳನ್ನು ತುಂಬಲಾಗಿದೆಯೇ?

ಈ) ಇಲ್ಲದಿದ್ದಲ್ಲಿ, ಪದೋನ್ನತಿ ನೀಡಿ ತುಂಬಲಾಗಿರುವ ಹುದ್ದೆಗಳ ಸಂಖ್ಯೆ ಮತ್ತು ಪದೋನ್ನತಿ ನೀಡಬೇಕಾದ ಹುದ್ದೆಗಳ ಸಂಖ್ಯೆ?

ಶ್ರೀ ಟಿ.ಎನ್. ನರಸಿಂಹಮೂರ್ತಿ (ಆಹಾರ ಮತ್ತು ನಾಗರೀಕ ಸರಬರಾಜು ಸಚಿವರು) --

ಅ) 32

ಆ) 19

ಇ) ಹೌದು

ಈ) ಉದ್ಭವಿಸುವುದಿಲ್ಲ

**ಬೀದರ್ ಜಿಲ್ಲೆಗೆ 1991–92ನೇ ಸಾಲಿನಲ್ಲಿ ವಕ್ಫ್ ಮಂಡಳಿಯಿಂದ ಬಿಡುಗಡೆ ಮಾಡಲಾದ ಸಹಾಯಧನ.**

1517. ಶ್ರೀ ಗುರುಪಾದಪ್ಪ ನಾಗಮಾರಪಳ್ಳಿ (ಬೀದರ್) :– ಮಾನ್ಯ ಸಾರಿಗೆ ಮತ್ತು ವಕ್ಫ್ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ –

ಅ) ಬೀದರ್ ಜಿಲ್ಲೆಯಿಂದ 1991–92ನೇ ಸಾಲಿನಲ್ಲಿ ಮಸೀದಿಗಳ ಜೀರ್ಣೋದ್ಧಾರ, ಹೊಸ ಕಟ್ಟಡದ (ಮಸೀದಿ) ನಿರ್ಮಾಣದ ಬಗ್ಗೆ ಸಹಾಯಧನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ ಎಷ್ಟು (ಜನವರಿ 31, 1992 ರ ವರೆಗೆ)? (ತಾಲ್ಲೂಕುವಾರು ವಿವರಗಳನ್ನು ಸಂಸ್ಥೆಗಳ ಹೆಸರಿನ ಸಹಿತ ನೀಡುವುದು)

ಆ) ಈ ಪೈಕಿ ಎಷ್ಟು ಅರ್ಜಿಗಳಿಗೆ ಎಷ್ಟು ಮೊತ್ತದ ಸಹಾಯಧನವನ್ನು ಮಂಜೂರು ಮಾಡಲಾಗಿದೆ?

ಶ್ರೀ ಅಜೀಜ್ ಸೇಠ್ (ಸಾರಿಗೆ ಮತ್ತು ವಕ್ಫ್ ಸಚಿವರು) –

ಅ) ಸಹಾಯಧನ ಕೋರಿ ಬಂದಿರುವ ಅರ್ಜಿಗಳ ಸಂಖ್ಯೆ 50
ತಾಲ್ಲೂಕುವಾರು ವಿವರಗಳು ಈ ಕೆಳಕಂಡಂತಿವೆ.

| ಕ್ರ. ಸಂ. | ಸಂಸ್ಥೆಯ ಹೆಸರು |
|---|---|
| | **ಬೀದರ್ ತಾಲ್ಲೂಕು** |
| 1. | ಜಮಿಯ ಮಸ್ಜಿದ್, ರಂಜೋಖಾನಿ ವಿಲೇಜ್. |
| 2. | ಮಸ್ಜಿದ್ ನೂರುಲ್, ಪಾಗೆಲ್ ವಾಡ. |
| 3. | ಮಸ್ಜಿದ್ ಮುಸಾಫರ್ ಹುಸೇನಿ ಮನಿಯಾರ್ ತಲೀಮ್. |
| 4. | ಜಿಲ್ಲಾ ಲಾಲ್ ಮೀಯಾನ್, ಕೋಲಾರ (ಕ). |
| 5. | ಮಸ್ಜಿದ್ ದುಲ್ಹನ್, ಷಾ ಗಂಜೆ ಆಚೆ. |
| 6. | ಜಮೆ ಮಸ್ಜಿದ್, ಮಲ್ಕಾಪುರ್ |